**<u>ಕರ್ನಾಟಕ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು ಇವರು ಶೂನ್ಯ ವೇಳೆಯ ಪ್ರಶ್ನೆಗೆ ಮಾಹಿತಿ</u>**

ಪ್ರಶ್ನೆ:-

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ಕಳೆದ ಕೆಲವು ದಿನಗಳಿಂದ ಮಧ್ಯವರ್ತಿಗಳು ಮತ್ತು ಕಂದಾಯ ಇಲಾಖೆಯ ಕೆಲವು ಅಧಿಕಾರಿಗಳು ಶಾಮೀಲಾಗಿ ಆಕ್ರಮವಾಗಿ ಸುಮಾರು 300ಕ್ಕೂ ಹೆಚ್ಚು ಸಾಗುವಳಿ ಚೀಟಿಗಳನ್ನು ಹಂಚಿಕೆ ಮಾಡಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದ್ದು, ತಾಲ್ಲೂಕಿನ ಕೆಲವು ರೈತರು ಮತ್ತು ಸಾಮಾಜಿಕ ಹೋರಾಟಗಾರರು ಇಡೀ ಹಗರಣದ ತನಿಖೆಯನ್ನು ಕೋರಿ ಮಾನ್ಯ ಕಂದಾಯ ಸಚಿವರಿಗೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಅಡಿಯಲ್ಲಿ ಮತ್ತು ತಮ್ಮ ಅನುಭೋಗವನ್ನು ಸಕ್ರಮಗೊಳಿಸಲು ಕೋರಿ ವಿವಿಧ ನಮೂನೆಗಳ ಮೂಲಕ ಸಾವಿರಾರು ರೈತರು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗಳು ವಿಲೇವಾರಿಗೆ ಬಾಕಿ ಇರುತ್ತವೆ. ಮೂಲ ರೈತರಿಗೆ ಮತ್ತು ಬಗರ್‌ಹುಕುಂ ರೈತರಿಗೆ ಭೂಮಿ ಹಂಚಿಕೆ ಮಾಡದೆ, ಕೆಲವು ದಲ್ಲಾಳಿಗಳು ಮತ್ತು ಕೆಲವು ಕಂದಾಯ ಇಲಾಖೆಯ ಅಧಿಕಾರಿಗಳು ಕಾನೂನುಬಾಹಿರವಾಗಿ ನಕಲಿ ದಾಖಲೆ ಸೃಷ್ಟಿಸಿ, ಬೇರೆ ಸ್ಥಳದವರಿಗೆ ಮತ್ತು ಸ್ಥಳದಲ್ಲಿ ಸಾಗುವಳಿ ಮಾಡದೇ ಇರುವ ವ್ಯಕ್ತಿಗಳಿಗೆ ಸಾಗುವಳಿ ಚೀಟಿಗಳನ್ನು ಹಂಚಿಕೆ ಮಾಡಿದ್ದು, ದೊಡ್ಡ ಮಟ್ಟದ ಹಗರಣ ನಡೆದಿರುತ್ತದೆ. ಕಂದಾಯ ಇಲಾಖೆಯಲ್ಲಿ ದಾಖಲೆಗಳನ್ನು ತಿದ್ದುವ, ಮೂಲ ದಾಖಲೆಗಳನ್ನು/ಕಡತಗಳನ್ನು ಕದ್ದಿರುವ ಆರೋಪಗಳು ಬಂದಿರುತ್ತದೆ. ಇದರಿಂದ ಮೂಲ ರೈತರಿಗೆ ಮತ್ತು ಫಲಾನುಭವಿಗಳಿಗೆ ಅನ್ಯಾಯವಾಗಿರುತ್ತದೆ. ಆದುದರಿಂದ ಈ ಪ್ರಕರಣದಲ್ಲಿ ಶಾಮೀಲಾಗಿರುವ ದಲ್ಲಾಳಿಗಳು ಮತ್ತು ಕಂದಾಯ ಇಲಾಖೆಯ ಕೆಲವು ನೌಕರರ ಮೇಲೆ ಕೂಡಲೇ ತನಿಖೆ ಮಾಡಿ, ಅಕ್ರಮ ಸಾಗುವಳಿ ಚೀಟಿ ಹಂಚಿಕೆಗೆ ತಡೆ ನೀಡಿ ಮೂಲ ಫಲಾನುಭವಿಗಳಿಗೆ ಕೃಷಿ ಭೂಮಿಯನ್ನು ಹಂಚಿಕೆ ಮಾಡಲು, ಅಪರಾಧಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವ ಕುರಿತು.

<u>ಉತ್ತರ:-</u> ಚಿಕನಾಯಕನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಸಾಗುವಳಿ ಚೀಟಿ ಹಂಚಿಕೆಯಲ್ಲಿ ಅವ್ಯವಹಾರವಾಗಿದೆ ಎಂದು ದಿನಾಂಕ:21.11.2025ರ ವಿಜಯವಾಣಿ ದಿನಪತ್ರಿಕೆಯಲ್ಲಿ ಬಂದಿದ್ದ ಸುದ್ದಿಯ ಬಗ್ಗೆ ಪರಿಶೀಲಿಸಿ, ವಾಸ್ತವಾಂಶದ ವರದಿಯನ್ನು ತುರ್ತಾಗಿ ಸಲ್ಲಿಸಲು ಸೂಚಿಸಿ ಉಪವಿಭಾಗಾಧಿಕಾರಿ, ತಿಪಟೂರು ರವರಿಗೆ ದಿನಾಂಕ:21.11.2025ರಂದು ಬರೆಯಲಾಗಿದೆ.

ಅದರಂತೆ, ಉಪವಿಭಾಗಾಧಿಕಾರಿ, ತಿಪಟೂರು ಇವರು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಚೇರಿಗೆ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಲಾಗಿದ್ದು, ತಾಲ್ಲೂಕು ಕಚೇರಿಯಲ್ಲಿ 98 ನಕಲಿ ಸಾಗುವಳಿ ಚೀಟಿಯಂತೆ ಖಾತೆ ಮಾಡಲು ಕೋರಿ ಅರ್ಜಿಗಳು ಸ್ವೀಕೃತವಾಗಿರುವುದು ಕಂಡುಬಂದಿರುತ್ತದೆ. ನಂತರ ಅಭಿಲೇಖಾಲಯ ಶಾಖೆಯಲ್ಲಿ ಪರಿಶೀಲಿಸಲಾಗಿ, ಅನಧಿಕೃತ ಮಂಜೂರಾತಿ ಕಡತಗಳನ್ನು ಸೃಷ್ಟಿಸಿರುವ ಒಟ್ಟು 6 ಕಡತಗಳು ಲಭ್ಯವಾಗಿದ್ದು, ಸದರಿ ಕಡತಗಳಲ್ಲಿ 31 ನಕಲಿ ಸಾಗುವಳಿ ಚೀಟಿಗಳು ಕಂಡುಬಂದಿರುತ್ತವೆ. ಸದರಿ 6 ಕಡತಗಳನ್ನು ಸೀಜ್ ಮಾಡಿ ಸೀಲ್ಡ್ ಟ್ರಂಕ್‌ನಲ್ಲಿ ಉಪ ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಇರಿಸಲಾಗಿದೆ. ಮುಂದುವರೆದು, 2018 ರಿಂದ ಈ ತಹಲ್‌ವರೆವಿಗೂ ಅಭಿಲೇಖಾಲಯದಲ್ಲಿ ಕರ್ತವ್ಯ ನಿರ್ವಹಿಸಿರುವ

ಅಧಿಕಾರಿ/ನೌಕರರ ವಿರುದ್ಧ FIR ದಾಖಲಿಸಲು ತಹಸೀಲ್ದಾರ್ ರವರಿಗೆ ಸೂಚಿಸಲಾಗಿದೆ ಹಾಗೂ ಈಗಾಗಲೇ ನಕಲಿ ಸಾಗುವಳಿ ಚೀಟಿಯಂತೆ ಖಾತೆ ಮಾಡಲು ಕೋರಿರುವ 32 ಜನ ರೈತರ ಮೇಲೆ FIR, (ಅಪರಾಧ ಸಂಖ್ಯೆ 0182/2025) ದಾಖಲಿಸಿದ್ದು, ತನಿಖೆ ನಡೆಯುತ್ತಿದ್ದು ವರದಿ ಸಲ್ಲಿಸಲು ಬಾಕಿ ಇರುತ್ತದೆ.

ಅಲ್ಲದೇ, ಉಪವಿಭಾಗಾಧಿಕಾರಿ, ತಿಪಟೂರು ಉಪವಿಭಾಗ ರವರ ಕಾರ್ಯಾಲಯದಿಂದ ದಿನಾಂಕ:09-12-2025 ರಂದು ತ್ರಿಸದಸ್ಯರ ತನಿಖಾ ತಂಡ ರಚಿಸಿದ್ದು, ಸದರಿ ತನಿಖಾ ತಂಡದವರು ನೀಡಿರುವ ವರದಿಯಲ್ಲಿ ಶ್ರೀ ಜಿ.ಎನ್. ಕೀರ್ತಿ ರವರು ದಿನಾಂಕ:08/02/2023 ರಿಂದ ದಿನಾಂಕ:20-02-2023 ಮತ್ತು ದಿನಾಂಕ:19-06-2024 ರಿಂದ ದಿನಾಂಕ:25-07-2024 ರವರೆಗೆ ಗ್ರೇಡ್-1 ತಹಶೀಲ್ದಾರ್ ಹುದ್ದೆಯ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸಿರುವುದು ಕಂಡುಬಂದಿರುತ್ತದೆ. ಇವರ ಮಾದರಿ ಸಹಿ ಮಾಹಿತಿಗೆ ಸಂಬಂಧಿಸಿರುವಂತೆ ಸಿ.ಟಿ.ಸಿ ಮೂಲ ಪ್ರತಿಯೊಂದಿಗೆ ಪರಿಶೀಲಿಸಲಾಗಿದೆ. ಇವರ ಸಹಿ ನಕಲಿ ದಾಖಲೆಯಲ್ಲಿನ ಸಹಿಗೆ ತಾಳೆಯಾಗಿರುವುದಿಲ್ಲ, ಈ ಕುರಿತು ಸಿ.ಟಿ.ಸಿ ದೃಢೀಕೃತ ಪ್ರತಿ ಪಡೆಯಲಾಗಿರುತ್ತದೆ.

ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ವಶಪಡಿಸಿಕೊಂಡಿರುವ 06 ಕಡತದಲ್ಲಿ ಕಂಡಂತೆ ಎಲ್ಲಾ ಕಡತದ ಸಾಗುವಳಿ ಚೀಟಿಯಲ್ಲಿ ಶ್ರೀ ಎಂ.ಶಿವಲಿಂಗಮೂರ್ತಿ ಇವರ ಸಹಿಯನ್ನು ಹೋಲುವಂತೆ ಸಹಿ ಇದ್ದು, ಈ ಕುರಿತು ತಾಲ್ಲೂಕು ಕಛೇರಿಯಲ್ಲಿನ ಸಾಗುವಳಿ ವಿತರಣೆ ವಹಿಯನ್ನು ಪರಿಶೀಲಿಸಲಾಗಿ, ನಕಲಿ ಮಂಜೂರಿ ಕಡತಗಳಿಗೆ ಸಂಬಂಧಿಸಿದ ಕಡತದಲ್ಲಿನ ನಕಲಿ ಸಾಗುವಳಿ ಚೀಟಿಯ ವಿವರ ಸಾಗುವಳಿ ವಿತರಣೆ ವಹಿಯಲ್ಲಿ ಕಂಡುಬಂದಿರುವುದಿಲ್ಲ.

ಮುಂದುವರೆದು, 06 ನಕಲಿ ಮಂಜೂರು ಕಡತದಲ್ಲಿನ ಎಲ್ಲಾ ದಾಖಲೆಗಳಲ್ಲಿನ ಸಾಗುವಳಿ ಚೀಟಿಯಲ್ಲಿ ಶ್ರೀ ಎಂ. ಶಿವಲಿಂಗಮೂರ್ತಿ ಇವರ ಹೆಸರು ಇದ್ದು ಸಹಿ ಕೂಡ ಅವರ ಮೂಲ ಸಹಿಗೆ ಹೋಲುವಂತೆ ಮೇಲ್ನೋಟಕ್ಕೆ ಕಂಡುಬಂದಿದ್ದು, ಈ ಬಗ್ಗೆ ಖಾತರಿಪಡಿಸಿಕೊಳ್ಳಲು ಶ್ರೀ ಎಂ. ಶಿವಲಿಂಗಮೂರ್ತಿ ಇವರ ಸಿ.ಟಿ.ಸಿ ಮೂಲ ಪ್ರತಿ ಹಾಗೂ LND/RUC/CR/5580/91-92 ಹುಳಿಯಾರು ಹೋಬಳಿ, ದಸೂಡಿ ಗ್ರಾಮದ ಸನಂ. 64/*/2 ರಲ್ಲಿನ ಸಾಗುವಳಿ ಚೀಟಿಯಲ್ಲಿನ ಸಹಿಗೆ ತಾಳೆ ಮಾಡಲಾಗಿ ಹೋಲಿಕೆ ಇರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತೆ. ಈ ಕುರಿತು ಮುಂದಿನ ತನಿಖೆ ಅಗತ್ಯವಿರುತ್ತದೆ. ಹೆಚ್ಚಿನ ತನಿಖೆ ಕೈಗೊಳ್ಳಲು ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ ಆದ್ದರಿಂದ ತನಿಖೆ ಕಾರ್ಯ ಪೂರ್ಣಗೊಂಡ ನಂತರ ಅಂತಿಮ ತನಿಖಾ ವರದಿಯನ್ನು ಸಲ್ಲಿಸಲಾಗುವುದು ಎಂಬ ವಾಸ್ತಾಂಶದ ಮಧ್ಯಂತರ ವರದಿಯನ್ನು ತಮ್ಮ ಅವಗಾಹನೆಗೆ ತರಬಯಸಿದೆ.

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಕಂ.ಇ.160.ಎಲ್.ಜಿ.ಟಿ 2025